ಶ್ರೀ ಎನ್. ಹುಚ್ಚಮಾಸ್ತಿಗೌಡ :—ಇಲ್ಲಿನ ಕೇಸಿನ ವಿದ್ಯಾಮಾನಗಳನ್ನು ನೋಡಿ ಅವರ ಮೇಲೆ ಸೂಕ್ತವಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಜಿ. ಬಣಕಾರ್ :—ಹಾವೇರಿ ತಾಲ್ಲೂಕಿನ ಶ್ರೀ ಹಿರೇಮಠರವರೂ ಹಾಗೂ ತಹಶೀಲುದಾರರು ಒಂದೇ ಜಾತಿಗೆ ಸೇರಿದವರು ಮತ್ತು ಸಂಬಂಧಿಗಳೂ ಆಗಿರುವುದರಿಂದ ಇಲ್ಲಿ ಉದ್ದೇಶಪೂರ್ವಕವಾಗಿ ಇದರಲ್ಲಿ ಜಮೀನುದಾರರಿಗೆ ಅನುಕೂಲವಾಗುವಂತೆ ಮಾಡಿದ್ದಾರೆ, ಆದುದರಿಂದ ಇಲ್ಲಿರುವ ಈ ತಹಶೀಲುದಾರರನ್ನು ಈ ತಾಲ್ಲೂಕಿನಿಂದ ಬೇರೆ ಹೊರಗಿನ ಜಿಲ್ಲೆಗೆ ಕಳುಹಿಸುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ :—ಇದರಲ್ಲಿ ಒಂದೇ ಜಾತಿ ಹಾಗೂ ಸಂಬಂಧ ಇದರ ಮೇಲೆ ಮಾಡುವುದಕ್ಕಾಗುವುದಿಲ್ಲ. ಕಾನೂನಿಗೆ ವಿರೋಧವಾಗಿ ಮಾಡಿದ್ದರೆ ಅವರ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ. ಇವರನ್ನು ತಾಲ್ಲೂಕಿನಿಂದ ಹೊರಕ್ಕೆ ಟ್ರಾನ್ಸ್‌ಫರು ಮಾಡುವುದರಿಂದ ಸರಿಯಾಗುವುದಿಲ್ಲ. ಇವಕ್ಕಿಂತ ಹೆಚ್ಚಿನ ಚಿಕಿತ್ಸೆ ಮಾಡುವುದು ಅವಶ್ಯಕ ಎಂದು ಕಂಡು ಬಂದರೆ ಅದನ್ನೂ ಮಾಡುತ್ತೇವೆ.

ಶ್ರೀ ಬಿ. ಜಿ. ಬಣಕಾರ್ :—ಸಬ್‌ರಿಜಿಸ್ಟ್ರಾರ್ ಆಫೀಸುಗಳಲ್ಲಿ ಆರ್. ಆರ್. ರೈಟುಗಳ ಪ್ರಕಾರ ದಾಖಲೆಗಳನ್ನು ಇಲ್ಲಿರುವ ತಲಾಟೆಗಳು ಕೊಡುವುದರಲ್ಲಿ ನಿಧಾನವಾಗುತ್ತಿದೆ, ಎರಡು ಮೂರು ವರ್ಷಗಳಾದರೂ ದಾಖಲೆ ಪತ್ರಗಳು ಸಿಗುವುದಿಲ್ಲ. ಇಂತಹ ತಲಾಟೆಗಳ ಮೇಲೆ ಸೂಕ್ತವಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೀರಾ ? ಇಲ್ಲವೇ ಇದರ ಬಗ್ಗೆ ಸರಿಯಾದ ಆದೇಶವನ್ನೇನಾದರೂ ಕಳುಹಿಸುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ :—ಎಲ್ಲ ಅಧಿಕಾರಿಗಳಿಗೂ ಈಗಾಗಲೇ ಆದೇಶವನ್ನು ಕಳುಹಿಸಲಾಗಿದೆ. ಆದಷ್ಟುಮಟ್ಟಿಗೆ ಜಾಗ್ರತೆಯಾಗಿ ಇದರ ಬಗ್ಗೆ ಸೂಕ್ತವಾದ ಕಾರ್ಯಕ್ರಮ ತೆಗೆದುಕೊಳ್ಳಬೇಕು ಮತ್ತು ಬಾಕಿಯಾಗಿ ನಿಲ್ಲಿಸಬಾರದು ಎಂದೂ ಆದೇಶ ಕೊಡಲಾಗಿದೆ.

EXPLORATION OF IRON ORE AND LIMESTONE IN MATHYGHATTA IN SIRSI TALUK

896. SMT. RADHA BHATT (Ankola).—

Will the Minister for Industries be pleased to state :—

(*a*) whether Government have conducted exploration regarding the mineral wealth available in plenty in Mathyghatta (Madyaghatta) of Sirsi Taluk ;

(*b*) if so, the details thereon ;

(*c*) whether any action would be taken for utilising lime-stone and iron ore in case they are available in plenty in this area ?

Sri S. M. KRISHNA (Minister for Industries) :—

(*a*) Exploration was conducted near Mathyghatta regarding Minerals available in 1970-71.

(*b*) Exploration was conducted regarding Iron ore, Limestone and Manganese.

(c) A detailed investigation has to be conducted to know the usefulness of iron ore and lime-stone available here, for utilisation in the industries.

ಶ್ರೀಮತಿ ರಾಧಾಭಟ್ :—ಮತ್ತಿಘಟ್ಟದ ಬಳಿ 1970–71 ನೇ ಸಾಲಿನಲ್ಲಿ ಖನಿಜಗಳಿಗಾಗಿ ಶೋಧನೆ ನಡೆಸಿದೆ ಎಂದು ಹೇಳಿದ್ದೀರಿ ? ಈ ಶೋಧನೆಗಳನ್ನು ನಡೆಸಿದವರು ಯಾರು ? ಮತ್ತು ಅವರು ಕಳುಹಿಸಿರುವ ಶೋಧನೆಗಳ ವಿವರಗಳಾವುವು ?

ಶ್ರೀ ಎಸ್. ಎಂ. ಕೃಷ್ಣ :—ಇದರ ಶೋಧನೆ ನಡೆಸಿದವರು ನಮ್ಮ ಕೈಗಾರಿಕಾ ಇಲಾಖೆಗೆ ಸೇರಿದ ಡೈರೆಕ್ಟರ್ ಆಫ್ ಜಿಯಾಲಜಿ, ಗವರ್ನಮೆಂಟ್ ಆಫ್ ಮೈಸೂರು ಇವರಿಂದ ನಡೆಸಲಾಗಿದೆ. ಇವರು ಕಳುಹಿಸಿರುವ ವರದಿಯಲ್ಲಿ ಇಲ್ಲಿ ಕಬ್ಬಿಣದ ಅದಿರು ಹಾಗೂ, ಸುಣ್ಣಕಲ್ಲುಗಳು ಸಿಗುತ್ತವೆ. ಇದರಲ್ಲಿ ಸಿಗುವ ಕಬ್ಬಿಣದ ಅದುರಿನ ಓರ್ ಕಂಟೆಂಟ್ಸ್‌ಗಳು ಶೇಕಡಾ 55 ರಿಂದ 62 ರ ವರೆಗೆ ಇದೆ. ಮತ್ತು ಸುಮಾರು ಇಪ್ಪತ್ತು ಮಿಲಿಯನ್ ಟನ್‌ಗಳಷ್ಟು ಕಬ್ಬಿಣದ ಅದಿರು ಸಿಗಬಹುದು ಎಂದು ಅವರು ಕಳುಹಿಸಿರುವ ಪ್ರಾಸ್ತಾವಿಕ ಶೋಧನೆ ವರದಿಯಲ್ಲಿ ವ್ಯಕ್ತವಾಗುತ್ತದೆ.

ಶ್ರೀಮತಿ ರಾಧಾಭಟ್:—ಇಲ್ಲಿ ಸಿಗುವ ಕಬ್ಬಿಣದ ಅದಿರು ಹಾಗೂ ಸುಣ್ಣಕಲ್ಲು ಇವುಗಳನ್ನು ಪಡೆದುಕೊಂಡು ಇಲ್ಲಿ ಯಾವ ಕೈಗಾರಿಕೆಯನ್ನು ಅಭಿವೃದ್ಧಿ ಮಾಡಬೇಕೆಂದು ಪರಿಶೋಧನೆ ನಡೆಸಿದ್ದೀರಿ ? ಮತ್ತು ಈ ಪರಿಶೋಧನೆಯೆಲ್ಲಾ ಮುಗಿಯಲು ಇನ್ನೂ ಎಷ್ಟು ಕಾಲ ಬೇಕಾಗುತ್ತದೆ ?

ಶ್ರೀ ಎಸ್. ಎಂ. ಕೃಷ್ಣ :—ಪರಿಶೋಧನೆ ನಡೆಯುತ್ತಿದೆ. ಈ ಪರಿಶೋಧನೆ ನಡೆದು ಅದು ನಮ್ಮ ಡಿಪಾರ್ಟ್‌ಮೆಂಟಿಗೆ ಬಂದ ಮೇಲೆ ಇದರ ಬಗ್ಗೆ ಆಗಿಂದಾಗ್ಗೆ ರೆವ್ಯೂ ಮಾಡಲಾಗುತ್ತದೆ. ಈಗಾಗಲೇ ಐರನ್ ಓರು ಬಗ್ಗೆ ಒಂದು ಪ್ರಪೋಸಲ್ ಗವರ್ನಮೆಂಟ್ ಆಫ್ ಇಂಡಿಯಾದ ಮುಂದೆ ಇದೆ. ಇದಲ್ಲದೆ ಕೇಂದ್ರ ಸರ್ಕಾರದವರು ಇದರ ಬಗ್ಗೆ ಯಾವರೀತಿ ತೀರ್ಮಾನ ತೆಗೆದುಕೊಳ್ಳುತ್ತಾರೆ ಅದರ ಮೇಲೆ ಅದು ನಿಲ್ಲುತ್ತದೆ. ಮ್ಯಾಂಗನೀಸು ಓರು ಹಾಗೂ ಸುಣ್ಣಕಲ್ಲು ಇದರ ಬಗ್ಗೆ ಇನ್ನೂ ಪರಿಶೀಲನೆ ಮಾಡಬೇಕಾಗಿದೆ.

ಶ್ರೀಮತಿ ರಾಧಾಭಟ್ :—ಮತ್ತಿಘಟ್ಟದ ಪ್ರದೇಶದ ಕಾರವಾರ ಬಂದರಿಗೆ ಸಮೀಪದಲ್ಲಿದೆ. ಇದರಿಂದ ಇಲ್ಲಿ ಸಿಗುವ ಕಬ್ಬಿಣದ ಅದುರನ್ನು ರಫ್ತು ಮಾಡಲು ಬಹಳ ಅನುಕೂಲವಾಗಿದೆ. ಇದರಬಗ್ಗೆ ಸರಕಾರ ಏಕೆ ಕಾರ್ಯಕ್ರಮ ತೆಗೆದುಕೊಳ್ಳಬಾರದು ?

ಶ್ರೀ ಎಸ್. ಎಂ. ಕೃಷ್ಣ :—ಇದೊಂದು ಕಾರ್ಯಾಚರಣೆ ಮಾಡತಕ್ಕ ಬಹು ಉತ್ತಮವಾದ ಸಲಹೆ. ಕಾರವಾರ ಬಂದರು ನಮ್ಮ ದೇಶಕ್ಕೆ ಪ್ರಕೃತಿದತ್ತವಾಗಿ ಬಂದಿರುವ ಬಂದರು. ನಮ್ಮ ರಾಜ್ಯಕ್ಕೆ ಈ ಬಂದರು ಒದಗಿರತಕ್ಕದ್ದು ಒಂದು ವರ. ಇದನ್ನು ಉಪಯೋಗಿಸಿಕೊಳ್ಳುವುದಕ್ಕೆ ಮತ್ತು ಇಲ್ಲಿಂದ ಹೊರದೇಶಗಳಿಗೆ ನಮ್ಮ ಅದಿರನ್ನು ಸಾಗಿಸುವುದರ ಬಗ್ಗೆ ಸರಕಾರ ಸೂಕ್ತ ಏರ್ಪಾಡು ಮಾಡುತ್ತದೆ.

ಶ್ರೀ ಎಂ. ಹೆಚ್. ಜಯಪ್ರಕಾಶ ನಾರಾಯಣ್ :—ಸಿರಸಿ ತಾಲ್ಲೂಕು ಮತ್ತಿಘಟ್ಟಕ್ಕೆ ಬಹಳ ಸಮೀಪವಾಗಿದೆ. ಇಲ್ಲಿ ಕಬ್ಬಿಣದ ಅದಿರು ಸಿಗುತ್ತದೆ ಎಂದು ನಾವು ಹೇಳುತ್ತಲೇ ಇದ್ದೇವೆ. ಮತ್ತು ಸರಕಾರದವರು ಇದನ್ನು ಶೋಧನೆ ಮಾಡುತ್ತೇವೆ ಹಾಗೂ ಪರಿಶೋಧನೆ ಮಾಡುತ್ತೇವೆಂತಲೇ ಹೇಳುತ್ತಾ ಬರುತ್ತಿದ್ದಾರೆ. 1970–71ರಿ.ದಲೂ ಇನ್ನೂ ಇದು ಶೋಧನೆ ಪರಿಸ್ಥಿತಿಯಲ್ಲೇ ಇದೆ. ಮಾನ್ಯ ಸಚಿವರು ಗ್ರಾಮಾಂತರ ಪ್ರದೇಶಗಳಲ್ಲಿ ಕೈಗಾರಿಕೆ ಮಾಡಿ ಇದರಿಂದ ಜನಕ್ಕೆ

ಕೆಲಸಗಳು ಸಿಗುತ್ತವೆ ಎಂದು ಹೇಳುತ್ತಿದ್ದೇವೆ. ಇದುವರೆಗೆ ಇಲ್ಲಿ ಯಾವ ಕೈಗಾರಿಕೆಯೂ ಬರಲಿಲ್ಲ. ಇಲ್ಲಿ ಸಿಗುವ ಕಬ್ಬಿಣದ ಅದಿರು ಹಾಗೂ ಸುಣ್ಣಕಲ್ಲುಗಳನ್ನು ಪಯೋಗಿಸಿಕೊಂಡು ಇದಕ್ಕನುಕೂಲವಾಗುವಂತಹ ಒಂದು ಕೈಗಾರಿಕೆಯನ್ನು ಇಲ್ಲೇಕೆ ಸ್ಥಾಪನೆ ಮಾಡಬಾರದು ? ಇದರ ಬಗ್ಗೆ ಸರಿಯಾದ ಒಂದು ವರದಿ ತರಿಸಿಕೊಂಡು ಬೇಗನೆ ಇಲ್ಲಿ ಕೈಗಾರಿಕೆಯಾಗುವಂತೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಸ್. ಎಂ. ಕೃಷ್ಣ :—ಬಹಳ ಉತ್ತಮವಾದ ಸಲಹೆಯನ್ನು ಮಾನ್ಯ ಸದಸ್ಯರು ಇಲ್ಲಿ ಕೊಟ್ಟಿದ್ದಾರೆ. ಇದನ್ನು ಸರಕಾರ ತೀವ್ರಗತಿಯಿಂದ ಪರಿಶೀಲನೆ ಮಾಡುತ್ತದೆ.

INDUSTRIAL EXTENSION OFFICERS IN SHIMOGA DISTRICT

908- Sri S. M. Sheernaly Chandrasekhar (Hosanagar).—

Will the Minister for Industries be pleased to state :—

(a) the number of Industrial Extension Officers working in Shimoga District ;

(b) the nature of work allotted to them ;

(c) whether they have undertaken any project in Shimoga District ?

Sri S. M. Krishna (Minister for Industries).—

(a) Four.

(b) As per statement placed on the Table of the House.

(c) The Industries Extension Officers assist the District level officers and are not expected to undertake independent projects.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್ :—(ಇ) ಗೆ ಉತ್ತರವಾಗಿ ಸರಕಾರದವರು ಅವರೇ ಸ್ವತಂತ್ರವಾಗಿ ಯೋಜನೆಗಳನ್ನು ಕೈಕೊಳ್ಳಬೇಕಾಗಿರುವುದಿಲ್ಲ ಎಂದಿದೆ. ಇಂತಹ ಅಧಿಕಾರಿಗಳನ್ನು ಏಕೆ ನೇಮಕ ಮಾಡಬೇಕಾಗಿತ್ತು ? ಇಂತಹ ಅಧಿಕಾರಿಗಳಿಂದ ಏನಾದರೂ ಸರಕಾರಕ್ಕೆ ಯೋಜನೆಗಳು ಬಂದಿವೆಯೇ ? ಯಾವ ಯಾವ ಏರಿಯಾದಲ್ಲಿ ಯಾವ ಕೈಗಾರಿಕೆಗಳನ್ನು ಇಲ್ಲಿ ಮಾಡಬಹುದು ಎಂದು ಇಲ್ಲಿರುವ ಎಕ್ಸ್‌ಟೆನ್‌ಷನ್ ಆಫೀಸರುಗಳು ಸರಕಾರಕ್ಕೆ ವರದಿ ಕಳುಹಿಸಿದ್ದಾರೆ ?

ಶ್ರೀ ಎಸ್. ಎಂ. ಕೃಷ್ಣ :—ಎಕ್ಸ್‌ಟೆನ್‌ಷನ್ ಆಫೀಸರುಗಳು ಇಲ್ಲಿ ಎಂತಹ ಕೈಗಾರಿಕೆಗಳನ್ನು ಸ್ಥಾಪನೆ ಮಾಡಬಹುದೆಂಬುದರ ಬಗ್ಗೆ ಇಲ್ಲಿ ಕೈಗಾರಿಕೆ ಮಾಡಲು ಬರುವ ಉದ್ದಿಮೆದಾರರುಗಳಿಗೆ ಅಡ್ವೈಸ್ ಕೊಡಬಹುದು. ಮತ್ತು ಅವರಿಗೆ ಬೇಕಾದ ಸಹಕಾರ ಸವಲತ್ತುಗಳನ್ನು ಸರಕಾರದ ಮೂಲಕ ಕೊಡಿಸಬೇಕೆಂದು ಅವರನ್ನು ಮೊದಲು ನೇಮಕ ಮಾಡಲಾಯಿತು. ಇಲ್ಲಿರುವ ಎಕ್ಸ್‌ಟೆನ್‌ಷನ್ ಆಫೀಸರುಗಳು ಕೆಲವರು ಡಿಪ್ಲೊಮಾ ಹೋಲ್ಡರುಗಳಾಗಿದ್ದಾರೆ ಮತ್ತು ಕೆಲವರು ಸಾಧಾರಣವಾದ ಗ್ರಾಜುಯೇಟರುಗಳಾಗಿದ್ದಾರೆ. ಅದರೆ ಅವರೇ ನಮಗೆ ಬೇಕಾದ ಅಡ್ವೈಸನ್ನು ಕಳುಹಿಸಲು ಅವರಿಗೆ ಸಾಕಷ್ಟು ಎಕ್ಸ್‌ಪೀರಿಯನ್ಸ್ ಇಲ್ಲ. ಆದುದರಿಂದ ಇನ್ನು ಮೇಲೆ ಕೈಗಾರಿಕಾ ಇಲಾಖೆಯಲ್ಲಿ ಇಂತಹ ಹುದ್ದೆಗಳಿಗೆ ರೆಕ್ರೂಟ್ ಮಾಡುವಾಗ ಯಾರು ಕೈಗಾರಿಕೆಗಳಲ್ಲಿ ತರಬೇತಿ